## ಕರ್ನಾಟಕ ಸರ್ಕಾರ

ಸಂಖ್ಯೆ:ಬಿಟಿಇ/01/ಇಎಪಿ/2012-13

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01.
ದಿನಾಂಕ:21-06-2013.

### ಸುತ್ತೋಲೆ

ವಿಷಯ: ಡಿ ಸಿಇಟಿ ತಡೆ ಹಿಡಿಯಲಾಗಿರುವ ಪರೀಕ್ಷಾ ಫಲಿತಾಂಶ ಪ್ರಕಟಿಸುವ ಬಗ್ಗೆ.
ಉಲ್ಲೇಖ: ಈ ಕಛೇರಿಯ ಪತ್ರ ಸಂಖ್ಯೆ:ಬಿಟಿಇ 01 ಇಎಪಿ 2013-13
ದಿನಾಂಕ:06-06-2013

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಗಮನಕ್ಕೆ ತರಬಯಸುವ ಅಂಶವೆಂದರೆ ಡಿ ಸಿಇಟಿ – 2013ರ ಪರೀಕ್ಷೆಗೆ ನೋಂದಾಯಿಸಿರುವ ಕೆಲವು ವಿದ್ಯಾರ್ಥಿಗಳ ಡಿಪ್ಲೋಮಾ ನೋಂದಣಿ ಸಂಖ್ಯೆಗಳು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿರುವ ಮಾಹಿತಿಗೆ ತಾಳೆಯಾಗುತ್ತಿಲ್ಲ. ಮತ್ತು ಕೆಲವು ಸಂಸ್ಥೆಗಳ ಪ್ರಾಚಾರ್ಯರುಗಳ ಅಜಾಗರುಕತೆಯಿಂದ ಡಿ ಸಿಇಟಿ-13 ಪರೀಕ್ಷೆ ತೆಗೆದುಕೊಳ್ಳಲು ಇಚ್ಛೆ ವ್ಯಕ್ತಪಡಿಸಿ ಮನವಿ ನೀಡಿದ್ದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಮಂಡಳಿಗೆ ಕಳುಹಿಸುವಾಗ, ಮಂಡಳಿಯ ಸೂಚನೆಗಳನ್ನು ಪಾಲಿಸದೇ ಸಾಮಾನ್ಯ ಲಕೋಟೆಗಳಲ್ಲಿ ಸೇರಿಸಿ ಕಳುಹಿಸಲಾಗಿರುವುದರಿಂದ ಅಂತಹ ವಿದ್ಯಾರ್ಥಿಗಳ ಫಲಿತಾಂಶವನ್ನು ಇಂದಿನವರೆವಿಗೂ ಪ್ರಕಟಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ತಡೆಹಿಡಿಯಲಾದ ಫಲಿತಾಂಶಗಳಿಗೆ, ಸಂಬಂಧಪಟ್ಟ ಪ್ರಾಚಾರ್ಯರು ಅಂತಹ ವಿದ್ಯಾರ್ಥಿಗಳ ಅಗತ್ಯ ಮಾಹಿತಿಯೊಡನೆ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಗೆ ಖುದ್ದಾಗಿ ಬಂದು ಫಲಿತಾಂಶವನ್ನು ದಿನಾಂಕ:25-06-2013ರೊಳಗೆ ಪಡೆಯಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರುಗಳೇ ನೇರ ಹೊಣೆಗಾರಾಗಿರುತ್ತಾರೆಂದು ತಿಳಿಸಲಾಗಿದೆ.

22/6
ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

1. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ – ಪ್ರಿನ್ಸಿಪಾಲರಿಗೆ ಮುಂದಿನ ಕ್ರಮಕ್ಕಾಗಿ.
2. ಇ-ಗವರ್ನೆನ್ಸ್ ವಿಭಾಗಕ್ಕೆ – (ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ)
3. ಹೆಚ್ಚುವರಿ ಪ್ರತಿ.